**ಸಾಕ್ಷಿಯನ್ನು ದಿಃ *07/08/2025* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
***ಪಾಟೀ ಸವಾಲು ಃ ಶ್ರೀ ಜೆಬಿಪಿ ವಕೀಲರಿಂದ ವಾದಿ ಪರವಾಗಿ.***

ನಾನು ಭಾಗವಹಿಸಿದ್ದೇನೆ ಎಂದು ಹೇಳಲಾದ ಖರೀದಿ ವ್ಯವಹಾರದ ಆಸ್ತಿಯ ನಂಬರ ನನಗೆ ಹೇಳಲು ಬರುವುದಿಲ್ಲ. ಸದರಿ ಖರೀದಿ ಕಾಗದದಲ್ಲಿ ನನ್ನ ಸಾಕ್ಷಿ ರುಜುವಾತು ಹಾಕಿರುತ್ತೇನೆ. ಸದರಿ ಖರಿದಿ ಶ್ರೀಶೈಲ ಕಡೆಮನಿ ಮತ್ತು ಪ್ರಕಾಶ ಬಡಿಗೇರ ಇವರ ಮಧ್ಯ ಆಗಿರುತ್ತದೆ. ಸಾಕ್ಷಿದಾರರು ಪುನಃ ಮುದಲಿಂಗಪ್ಪ ಇವರು ಖರೀದಿ ಕೊಟ್ಟಿರುತ್ತಾರೆ, ಆದರೆ ಖರೀದಿ ಮೊಬಲಗು ನನಗೆ ಹೇಳಲು ಬರುವುದಿಲ್ಲ ಎಂದು ಹೇಳುತ್ತಾರೆ. ಸದರಿ ಖರೀದಿಯ ಕ್ಷೇತ್ರ ನಾಲ್ಕುವರೆ ಗುಂಟೆ ಇರುತ್ತದೆ, ಅದರ ನಂಬರ ಮತ್ತು ಚಕ್ಕುಬಂದಿ ನನಗೆ ಹೇಳಲು ಬರುವುದಿಲ್ಲ.

ನನ್ನ ಪ್ರಮಾಣಪತ್ರದ 1 ನೇ ಖಂಡಿಕೆಯಲ್ಲಿರುವ ಅಕ್ರಮ ಸಕ್ರಮ ಆಸ್ತಿಯ ನಂಬರ ಮತ್ತು ಕ್ಷೇತ್ರ ಅದರ ಪ್ರತಿಫಲ ವಗೈರೆ ನನಗೆ ಹೇಳಲು ಬರುವುದಿಲ್ಲ. ದಿಃ25-06-2009 ರಂದು ಮಾಡಿಕೊಂಡಿದ್ದಾರೆ ಎಂದು ಹೇಳಲಾದ ದಾಖಲೆ ನಾನು ನೋಡಿಲ್ಲ. ನನ್ನ ಪ್ರಮಾಣಪತ್ರದಲ್ಲಿ 3 ನೇ ಖಂಡಿಕೆಯಲ್ಲಿ ಬರೆಯಲಾದ ಹಿಂದಿನ ಕೇಸಿನ ರಾಜಿ ಕುರಿತು ಇರುವ ವಿವರಗಳು ನನಗೆ ಗೊತ್ತಿಲ್ಲ. ಈ ರೀತಿ 10 ಲಕ್ಷ ರೂಪಾಯಿಗಳು ಕೊಟ್ಟಿರುವ ಮುಖಾಂತರ ರಾಜಿ ಮಾಡಿರುವ ಆಸ್ತಿ ನಂಬರ ನನಗೆ ಹೇಳಲು ಬರುವುದಿಲ್ಲ. ದಾವಾದಾಸ್ತಿಯ ಸರ್ವೇ ನಂಬರ ಮತ್ತು ಕ್ಷೇತ್ರ ನನಗೆ ಗೊತ್ತಿಲ್ಲ.

ಸದರಿ ಸುಖನ್ಯಾ 30 ವರ್ಷಗಳಿಂದ ಪರಿಚಯವಿರುತ್ತಾರೆ. ದಾವಾದಾಸ್ತಿ ಮತ್ತು ವ್ಯಾಜ್ಯಾಂಶ ವಗೈರೆ ಗೊತ್ತಿಲ್ಲದೆಯಿದ್ದರೂ ಸಹ ಸುಖನ್ಯಾ ಬಡಿಗೇರ ಇವರು ನಮ್ಮ ಸಮಾಜದ ವ್ಯಕ್ತಿ ಇರುವ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣಪತ್ರದ ಮೂಲಕ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದು ಸೂಚಿಸುವ ನಿಮ್ಮ ಸಲಹೆ ಸರಿಯಲ್ಲ.

***ಮರು ವಿಚಾರಣೆ ಃ ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,

ಧಾರವಾಡ.